# ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** 2017-18ನೇ ಸಾಲಿನಲ್ಲಿ ರಾಜ್ಯವಲಯ ಯೋಜನೆಯಡಿ **ಜೈನ್ ಅಭಿವೃದ್ಧಿ ಯೋಜನೆಯಡಿ "ಬಿದಾಯಿ"** ಕಾರ್ಯಕ್ರಮಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲುಡಿ 169 ಎಂಡಿಎಸ್ 2017, ದಿ: 06.04.2017
2) ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯುಡಿ 169 ಎಂಡಿಎಸ್ 2017 ದಿ: 13.10.2017

>>><<<

**ಪ್ರಸ್ತಾವನೆ:-**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಗಳನ್ನು 2017-18ನೇ ಆರ್ಥಿಕ ಸಾಲಿನಲ್ಲಿ ಮುಂದುವರೆಸಿ ಉಲ್ಲೇಖ (1)ರಲ್ಲಿ ಆದೇಶ ಹೊರಡಿಸಲಾಗಿದೆ. ಅದರಲ್ಲಿ ಜೈನ್ ಅಭಿವೃದ್ಧಿ ಯೋಜನೆಯನ್ನು ಸಹ ಮುಂದುವರೆಸಲಾಗಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಯಗಳಿಗೆ 2017-18ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಮೂರನೇ ತ್ರೈಮಾಸಿಕ ಕಂತನ್ನು ಬಿಡುಗಡೆ ಮಾಡಿ ಉಲ್ಲೇಖ (2)ರ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ.

ದಿ: 23.10.2017 ರಂದು ಜಿಲ್ಲೆಗಳಿಂದ ಪಡೆದ ಮಾಹಿತಿಯನ್ವಯ ಬಿದಾಯಿ ಕಾರ್ಯಕ್ರಮದಡಿ ಜೈನ್ ಫಲಾನುಭವಿಗಳ ಅರ್ಜಿಗಳು 273 ಬಾಕಿ ಇರುತ್ತವೆ. ಸದರಿ ಅರ್ಜಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಬೇಕಾಗಿದೆ.

ಜೈನ್ ಅಭಿವೃದ್ಧಿ ಯೋಜನೆಯಡಿ ಮೂರನೇ ಕಂತಿನ ಅನುದಾನ ರೂ. 2600.00 ಲಕ್ಷಗಳನ್ನು ಬಿಡುಗಡೆ ಮಾಡಿ ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು ಇವರ ವಶಕ್ಕೆ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನದ ಪೈಕಿ ಜೈನ್ ಫಲಾನುಭವಿಗಳಿಗೆ ಬಿದಾಯಿ ಕಾರ್ಯಕ್ರಮಕ್ಕಾಗಿ ರೂ 136.50 ಲಕ್ಷ (ರೂ ಒಂದು ಕೋಟಿ ಮೂವತ್ತ ಆರು ಲಕ್ಷದ ಐವತ್ತು ಸಾವಿರಗಳು ಮಾತ್ರ)ಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮರು ಬಿಡುಗಡೆ ಮಾಡಬೇಕಾಗಿರುವುದರಿಂದ ಈ ಆದೇಶ.

## ಆ ದೇ ಶ

**ಸಂಖ್ಯೆ: ಅಸಂನಿ/ಬಿದಾಯಿ/ಸಿಆರ್-1/2017-18** **ದಿನಾಂಕ: 24.10.2017**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಜೈನ್ ಸಮುದಾಯದ ಅಭಿವೃದ್ಧಿ ಯೋಜನೆಯಡಿ "ಬಿದಾಯಿ" ಕಾರ್ಯಕ್ರಮವನ್ನು ಜಾರಿಗೊಳಿಸಲು 2017-18ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಮೂರನೇ ಕಂತಿನ ಅನುದಾನದಲ್ಲಿ ರೂ. 136.50 ಲಕ್ಷ (ರೂ. ಒಂದು ಕೋಟಿ ಮೂವತ್ತ ಆರು ಲಕ್ಷದ ಐವತ್ತು ಸಾವಿರಗಳು ಮಾತ್ರ) ಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ಆಯಾ ಜಿಲ್ಲೆ ಮುಂದೆ ತೋರಿಸಿರುವ ಮೊತ್ತವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

ರವಾನಿಸಿದೆ. ದಿನಾಂಕ 25/10/17